# ಪ್ರಾಪಂಚಿಕರಾಗದಿರಿ

ಶ್ರೀರಾಮಕೃಷ್ಣರು ವ್ರತ ನಿಯಮಾದಿಗಳನ್ನು ಪಾಲಿಸುವುದನ್ನು ಒಪ್ಪುತ್ತಿದ್ದರು. ಅವುಗಳಿಂದ ಬದುಕಿಗೊಂದು ಶಿಸ್ತು ಬರುತ್ತದೆ, ದೇಹದ ಆರೋಗ್ಯ ವೃದ್ಧಿಸುತ್ತದೆಯೆಂಬ ಆಶಯವಿರಬಹುದು. ಅದರೊಡನೆ ದೈವೀಶಕ್ತಿಯ ಬಗ್ಗೆ ಅವರಿಗೆ ಅಚಲವಾದ ನಂಬಿಕೆ. ವ್ರತ ನಿಯಮಾದಿಗಳ ಮೂಲಕ ದೇವರ ಕೃಪೆಗೆ ಪಾತ್ರವಾಗಬಹುದೆಂಬ ನಂಬಿಕೆ ಅವರಿಗಿತ್ತು ಎಂಬುದರಲ್ಲಿ ಸಂಶಯವಿಲ್ಲ. ಅದರಲ್ಲೂ ಸನ್ಯಾಸಿಗಳು ಈ ಶಿಸ್ತು ಬದ್ಧ ನಿಯಮಗಳ ಪಾಲನೆಯಲ್ಲಿರಬೇಕೆಂದು ಆಶಿಸುತ್ತಿದ್ದರು. ಆದರೆ, ಶ್ರೀರಾಮಕೃಷ್ಣರು ಕರ್ಮಠರಾಗಿರಲಿಲ್ಲ. ಪ್ರೀತಿ ಪೂರ್ವಕ ನಂಬಿಕೆಯಿಲ್ಲದ ವ್ರತಗಳು ಅರ್ಥಹೀನವೆಂದು ಅವರು ಮನಗಂಡಿದ್ದರು. ಕೇವಲ ಡಂಬಾಚಾರದ ವ್ರತಗಳು ಸಮಾಜವನ್ನು ಟೊಳ್ಳುಗೊಳಿಸುತ್ತವೆಯೆಂದು ಅವರು ತಿಳಿದಿದ್ದರು. ಸಮಾಜದಲ್ಲಿರುವ ಅಸಂಖ್ಯಾತ ಲೌಕಿಕರಿಗೆ, ಅದರಲ್ಲೂ ಗೃಹಸ್ಥರಿಗೆ ಈ ನಿಟ್ಟಿನ ಕಠೋರ ನಿಯಮಗಳ ಅವಶ್ಯಕತೆಯಿಲ್ಲವೆಂದು ಅವರು ತಿಳಿಸಿದ್ದಾರೆ. 'ಕಠೋರ ನಿಯಮಗಳು ಗೃಹಸ್ಥರಿಗೆ ಸಲ್ಲ. ಅವರು ಕುಟುಂಬದ ಮಧ್ಯದಲ್ಲಿ ಇದ್ದೂ ದೇವರ ಮೇಲೆ ಮನಸಿಟ್ಟು ಅನಾಸಕ್ತರಾಗಿರಬಹುದು. ಅವರು ಪ್ರಪಂಚದಲ್ಲಿರಬೇಕು, ಆದರೆ ಪ್ರಾಪಂಚಿಕರಾಗಿರಬಾರದು.' ದೈವ ಸಾಧನೆಯಲ್ಲಿ ವ್ಯಕ್ತಿ ಆಚರಿಸಬೇಕಾದ ವ್ರತ ನಿಯಮಾದಿಗಳು ಕಠೋರವಾಗಿದ್ದಷ್ಟು ಅವು ವ್ಯಕ್ತಿಯಲ್ಲಿ ಸಹನಾಶಕ್ತಿಯನ್ನು ಮೂಡಿಸುತ್ತವೆ ಎಂಬ ಆಶಯವಿದ್ದರೂ, ದೇಹ ಮತ್ತು ಮನಸ್ಸುಗಳನ್ನು ವೃಥಾ ದಂಡಿಸುವುದರಿಂದ ದೈವ ಸಾಕ್ಷಾತ್ಕಾರವಾಗುತ್ತದೆ ಎಂಬುದು ಕೂಡ ಒಂದು ಭ್ರಮೆಯಷ್ಟೆ! ಈ ದೇಹ ಮತ್ತು ಮನಸ್ಸುಗಳ ದಂಡನೆಯನ್ನು ಕನ್ನಡದ ವಚನಕಾರರು ಮತ್ತು ದಾಸರು ಈ ಮೊದಲೇ ವಿಡಂಬಿಸಿರುವುದು ನಮಗೆ ತಿಳಿದ ವಿಷಯವೇ ಆಗಿದೆ.

ಶ್ರೀ ರಾಮಕೃಷ್ಣರು ಸ್ವತಃ ಗೃಹಸ್ಥರು. ಗೃಹಸ್ಥರಾಗಿದ್ದೂ ಬ್ರಹ್ಮಚರ್ಯೆಯಂಥ ಕಠೋರ ನಿಯಮವನ್ನು ಪಾಲಿಸಿದವರು. (ಆದರೆ ತಮ್ಮ ಪತ್ನಿಯನ್ನೂ ಪಾಲಿಸುವಂತೆ ಸಾತ್ತ್ವಿಕ ಒತ್ತಡ ಹೇರಿ ಒಪ್ಪಿಸಿದ್ದು ಎಂದಿಗೂ ಪ್ರಶ್ನಾರ್ಹ ನಡೆಯಾಗೇ ಉಳಿಯುತ್ತದೆ. ಸಮನ್ವಯ-ಪೂರ್ಣ ದೃಷ್ಟಿ-ಸಮಾನತೆಗಳನ್ನು ಎತ್ತಿಹಿಡಿಯುವ ಮೌಲ್ಯಗಳ ಪ್ರತಿಪಾದಕರಾದ ಇವರು ಲಿಂಗ ಮೂಲ ಹಕ್ಕನ್ನು ಧಾರ್ಮಿಕ ಪ್ರಭಾವಳಿಗಳಿಂದ ಹತ್ತಿಕ್ಕುವ ಕೆಲಸ ಮಾಡಿದರೆಂದೇ ಹೇಳಬೇಕಾಗುತ್ತದೆ.) ಅದರ ಕಷ್ಟ ಎಂಥದ್ದೆಂಬ ಅರಿವು ಅವರಿಗಿತ್ತು. ಆ ಕಾರಣದಿಂದಲೇ ಗೃಹಸ್ಥರಿಗೆ ಅಂಥ ಕಠೋರ ನಿಯಮಗಳು ಸಲ್ಲದು ಎನ್ನುತ್ತಾರೆ. ಬಹುಶಃ ರಾಮಕೃಷ್ಣರ ಸಮಾಜ ಮುಖೀ ನಿಲವು ಇದರಿಂದ ವ್ಯಕ್ತವಾಗುತ್ತದೆ. ಸನ್ಯಾಸಿಯಾದವನು ಕಠೋರ ನಿಯಮಗಳನ್ನು ಪಾಲಿಸಬೇಕು. ಏಕೆಂದರೆ ಅವನು ಪರಿತ್ಯಾಗಿ- ಅವನ ಗುರಿ ಅಧ್ಯಾತ್ಮ ಸಾಧನೆ. ಆದರೆ ಸಂಸಾರದಲ್ಲಿರಬೇಕಾದವನಿಗೆ ಹೊಣೆಗಾರಿಕೆಗಳು ಅಧಿಕ. ಕುಟುಂಬ, ಗ್ರಾಮ ಮತ್ತು ಸಮಾಜಗಳ ವ್ಯಾಪ್ತಿಯಲ್ಲಿ ಅವನು ಜವಾಬ್ದಾರಿಯುತ ಪಾಲುದಾರಿಕೆಯನ್ನು ನಿರ್ವಹಿಸಬೇಕಾಗುತ್ತದೆ. ಅವನು ಪಾಲಕ. ಕುಟುಂಬದಿಂದ ಹಿಡಿದು ಸಂಸಾರ ತ್ಯಾಗ ಮಾಡಿರುವ ಸನ್ಯಾಸಿಗಳವರೆಗೆ ಅವನ ಪಾಲನೆಯ ವ್ಯಾಪ್ತಿಯಲ್ಲಿರಬೇಕಾಗುತ್ತದೆ. ಹೀಗಾಗಿ 'ಸಂಸಾರ'ದ ಬಗೆಗಿನ ನಿರಾಸಕ್ತಿ ಅವನಿಗೆ ಸಲ್ಲದು. ಈ 'ಸಂಸಾರ'ದ ಅಭ್ಯುದಯದ ಬಗೆಗೆ ಸದಾ ಅವನು ಆಸಕ್ತನಾಗಿರಬೇಕು.

ಸಮಾಜದಲ್ಲಿರುವ ಅಸಮಾನತೆಯನ್ನು, ಭೇದಭಾವವನ್ನು ಹೋಗಲಾಡಿಸಿ ಮನುಜ ಧರ್ಮವನ್ನು ಎತ್ತಿಹಿಡಿಯುವ ಅಮೂಲ್ಯ ಕಾಯಕದ ಗುರಿ ಸನ್ಯಾಸಿಯದಾಗಬೇಕು. ಕೇವಲ ತನ್ನ ಆತ್ಮೋನ್ನತಿಯೇ ಅಂತಿಮಗುರಿಯೆಂದು ಭಾವಿಸುವಾತ ಸನ್ಯಾಸಿಯೆನ್ನಿಸಿಕೊಳ್ಳಲಾರ. ನಮಗೆ ಈ ನಿಟ್ಟಿನಲ್ಲಿ ಶ್ರೇಷ್ಠ ಮಾದರಿಯೂ ನಿದರ್ಶನವೂ ಆಗಿ ನಿಂತಿರುವ ಧೀರ ಸಂನ್ಯಾಸಿಯೆಂದರೆ- ವಿವೇಕಾನಂದರು. ಅವರು ಸನ್ಯಾಸತ್ವಕ್ಕೆ ಹೊಸ ಭಾಷ್ಯ ಬರೆದವರು. ಅವರನ್ನು ಸಮಾಜಮುಖೀ, ನಿಸ್ವಾರ್ಥಮುಖೀ ಸನ್ಯಾಸಿಯೆಂದೇ ಕರೆಯಬೇಕು. ಅವರು ಗೃಹಸ್ಥ ಧರ್ಮದಷ್ಟೇ ಹೊಣೆಗಾರಿಕೆಯ ಸ್ವರೂಪವನ್ನು ಸನ್ಯಾಸಕ್ಕೆ ದೊರಕಿಸಿಕೊಟ್ಟರು. ಸನ್ಯಾಸವನ್ನು ಸ್ವೀಕರಿಸಿಯೂ ಪ್ರಪಂಚದಲ್ಲಿದ್ದರು. ಜನಪರವಾದ ಚಿಂತನೆಯನ್ನು ನಡೆಸಿದರು. ಜನಪರ ಚಿಂತನೆಯ ಹೋರಾಟದಲ್ಲಿ ಆತ್ಮೋದ್ಧಾರದ ದಾರಿಯಿದೆಯೆಂದು ಅರ್ಥ ಮಾಡಿಕೊಂಡಿದ್ದರು.

ಶ್ರೀ ರಾಮಕೃಷ್ಣರು ಗೃಹಸ್ಥರನ್ನು ಕುರಿತು 'ಪ್ರಪಂಚದಲ್ಲಿರಬೇಕು, ಆದರೆ ಪ್ರಾಪಂಚಿಕರಾಗಬಾರದು' ಎಂದು ಹೇಳಿರುವ ಮಾತಿನಲ್ಲಿ ಲೋಕದಲ್ಲಿ ವ್ಯಕ್ತಿಯು ಬದುಕಿ ಬಾಳಬೇಕಾದ ಪರಿಯ ಸೂಚನೆಯನ್ನು ಕಾಣಬಹುದು. ವ್ಯಕ್ತಿಯ ಅಸ್ತಿತ್ವ ಇರುವುದೇ ಈ ಪ್ರಪಂಚದಲ್ಲಿ! (ಇದು ಕೇವಲ ಗೃಹಸ್ಥನಿಗೆ ಮಾತ್ರ ಅನ್ವಯಿಸುವ ಮಾತಲ್ಲ. ಸನ್ಯಾಸಿಗೂ ಅನ್ವಯವಾಗುವ ಮಾತು) ಅದನ್ನು ಬಿಟ್ಟು ಬೇರೆ ಜಗತ್ತು ಅವನಿಗಿಲ್ಲ. ಅವನೆಲ್ಲಾ ಸುಖ ಸಂಪತ್ತುಗಳು, ಹೋರಾಟ ಸಾಧನೆಗಳು, ಅಭಿವ್ಯಕ್ತ ಸ್ವರೂಪಗಳು ಈ ನೆಲದ ಮೇಲೆಯೇ ನಡೆಯಬೇಕು. ಅವನ ತತ್ವಸಿದ್ಧಾಂತ ಜಿಜ್ಞಾಸೆಗಳು, ಮೇಲು ಕೀಳೆಂಬ ಹಾರಾಟಗಳು ಜನರ ನಡುವೆಯೇ ನಡೆಯಬೇಕು. ಈ ಎಲ್ಲ ಸಾಧನೆಗಳಿಗಾಗಿ ನಡೆಸುವ ಮನುಷ್ಯನ ಕ್ರಿಯೆಗಳು ಶುದ್ಧಾಂಗ ಶುದ್ಧ ಜನಪರವಾಗಿರಬೇಕು. ಅವು ಎಂದೂ ಸ್ವಾರ್ಥ ಮೂಲವಾಗಿರಬಾರದು ಎಂಬುದು ಶ್ರೀ ರಾಮಕೃಷ್ಣರ ಇಂಗಿತ. ಅದು ಬಿಟ್ಟು ವ್ಯಕ್ತಿ ಸ್ವಾರ್ಥಿಯಾದರೆ (ಪ್ರಾಪಂಚಿಕನಾದರೆ) ಸಮಾಜಕ್ಕೆ ಅಪಾರ ಹಾನಿ; ಅವನಿಗೆ ತಿಳಿಯದಂತೆ ಅವನೂ ನಾಶವಾಗುತ್ತಾನೆ.

ಶ್ರೀ ರಾಮಕೃಷ್ಣರು ಶ್ರೀಗಂಧವಿದ್ದ ಹಾಗೆ. ಅವರೊಡನೆ ಗುದ್ದಾಡುವುದರಲ್ಲಿ ಆನಂದವಿದೆ.

■ **ಶಿಕಾಕು**

## ಮಾತೇ ಮುತ್ತು

★ ಒಳ್ಳೆಯದನ್ನು ವರ್ಣಿಸುವಾಗ ಮಾತು ಹೆಚ್ಚಾಗಲಿ. ಅಲ್ಲದ್ದನ್ನು ಕಂಡಾಗ ಮಾತು ಕೊಂಚಾಗಲಿ.

-ಬಿ.ಎಂ.ಶ್ರೀ.

★ ಸಂಶೋಧನೆ ಎನ್ನುವುದು ವಿಶ್ಲೇಷಣಾತ್ಮಕ ವಿಮರ್ಶೆ. ವಿಮರ್ಶೆ ಎನ್ನುವುದು ವ್ಯಾಖ್ಯಾನಾತ್ಮಕ ಸಂಶೋಧನೆ.

-ಎಂ.ಎಂ.ಕಲಬುರ್ಗಿ

★ ಈ ಮಂದ ಮುಂದಾಳುಗಳಿಗೆ ಮತ ಕೊಟ್ಟರೆ ಸ್ವರಾಜ್ಯದಾಣೆಯಾಗಿಯೂ ಮತವಧೆಯಾಗುವುದು; ಯಾರಿಗೂ ಕೊಡದೆ ಬಿಟ್ಟರೆ ಪ್ರಜಾಪ್ರಭುತ್ವ ಗ್ಲಾನಿಯಾಗುವುದು.

-ಬೀಚಿ

★ ಮೌನದ ಮಹತ್ವ ಮನಗಂಡಾಗ ಜಗತ್ತಿನ ಅನೇಕಾನೇಕ ವಿವಾದ- ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯ.

-ವೀರೇಂದ್ರ ಹೆಗ್ಗಡೆ

★ ಒಂದು ಮಟ್ಟದ ಬುದ್ಧಿ ವಿಕಾಸ ಇಲ್ಲದೆ, ಅಧ್ಯಯನ ಇಲ್ಲದೆ ಯಾರೂ ಕವಿಯಾಗಲಾರರು; ಕಾವ್ಯವನ್ನು ಓದಿ ಆನಂದಿಸಲಾರರು.

-ಲಾರ್ಡ್ ಮೆಕಾಲೆ

★ ಸೋಹಂ ಎಂದೆನಿಸದೇ ದಾಸೋಹಂ ಎಂದೆನಿಸಯ್ಯಾ.

-ಬಸವಣ್ಣ

★ ಯಾವ ಕನ್ನಡಿಗನ ಮನೆಯಲ್ಲಿ ಕೆಲವಾದರೂ ಕನ್ನಡ ಕೃತಿಗಳಿಲ್ಲವೋ ಅದು ಕನ್ನಡಿಗನ ಮನೆಯೇ ಎಂದು ಪ್ರಶ್ನಿಸುವಂತಾಗಬೇಕು.

-ಕಮಲಾ ಹಂಪನಾ

★ ಇಂದಿನ ಕನಸು, ನಾಳೆಯ ಮನಸು, ನಾಡಿದ್ದಿನ ಉಣಿಸು.

-ಕುವೆಂಪು

★ ಆತನೊಲಿದ ಮ್ಯಾಲೆ ಯಾತರ ಕುಲವಯ್ಯಾ?

-ಕನಕದಾಸ

★ ಓದಿ ಮರುಳಾಗಬಾರದು; ಓದದೆಯೂ ಮರುಳಾಗಬಾರದು; ಓದಿ ಹುರುಳಾಗಬೇಕು.

-ವಿ.ಕೃ.ಗೋಕಾಕ್

★ ಎಲ್ಲರೂ ತಮ್ಮದೇ ಅತಿ ದೊಡ್ಡ ಕಷ್ಟ ಎಂದುಕೊಳ್ಳುತ್ತಾರೆ!

-ಜಾರ್ಜ್ ಹರ್‌ಬರ್ಟ್

★ ನಮಗೆ ಅವಶ್ಯಕತೆ ಇಲ್ಲದುದನ್ನು ಪಡೆದಿದ್ದರೂ ಕಳ್ಳತನ ಮಾಡಿದಂತೆ.

-ಮಹಾತ್ಮ ಗಾಂಧೀಜಿ

★ ಕಾನೂನುಗಳಿಂದಾಗುವ ಅನ್ಯಾಯಗಳ ಪಾಲುದಾರರಾಗದಿದ್ದಲ್ಲಿ ನಾವೇ ಅನ್ಯಾಯಗಳಿಗೆ ಗುರಿ ಆಗಬೇಕಾಗುತ್ತದೆ. ಪ್ರಾಪಂಚಿಕ ಕಾನೂನುಗಳ ರೀತಿಯೇ ಹೀಗೆ.

-ಐಸಾಕ್ ಬಾಸೆವಿಕ್ ಸಿಂಗರ್